> ಆ ಕೂಸು ಬಂದ ಮೇಲೆ ಎಲ್ಲರೂ ನನ್ನನ್ನು ಮರೆತೆಬಿಟ್ಟಿದ್ದರು. ಎಲ್ಲರೂ ಅವನಿಗಾಗಿ ಕಾಳಜಿ ವಹಿಸುವವರೆ. ಮೊದಲು ಮನೆಯಲ್ಲಿ 'ಅಪ್ಪ ಮಲಗಿದ್ದಾನೆ, ಎಬ್ಬಿಸಬಾರದು' ಎಂಬ ಕಾಯಿದೆ ಇತ್ತು. ಈಗ 'ಸೋನ್ಯಾ ಮಲಗಿದ್ದಾನೆ. ಅವನನ್ನು ಎಬ್ಬಿಸಬಾರದು' ಎಂಬ ಹೊಸ ಕಾಯಿದೆ ಜಾರಿಗೆ ಬಂದಿತ್ತು. ಒಟ್ಟಿನಲ್ಲಿ ದುರಾದೃಷ್ಟ ನನ್ನ ಬೆನ್ನಿಗೆ ಬಿದ್ದಿದೆಯೆಂದು ಖಿನ್ನನಾದೆ.

ಆಲೋಚಿಸುತ್ತಿರಬೇಕಾದರೆ ಅವ್ವ ಈ ಹೊಸ ಬೆಳವಣಿಗೆಯನ್ನು ಹೇಳಿದಳು. ಒಟ್ಟಿನಲ್ಲಿ ನನ್ನ ಸುಖ–ಸಂತೋಷಕ್ಕೆ ಯಾವಾಗಲೂ ಕಲ್ಲು ಬೀಳುತ್ತ ಇರುತ್ತದೆ.

ಪಾಪು ಹುಟ್ಟುವ ಮುಂಚಿನ ನಿರ್ಲಕ್ಷ್ಯವನ್ನು ನಾನು ಹೇಗೋ ತಡೆದುಕೊಂಡಿದ್ದೆ. ಆದರೆ ಪಾಪು ಬಂದ ಮೇಲೆ ನಾನು ಎದುರಿಸಿದ ಪರಿಸ್ಥಿತಿಯಂತೂ ಬಹಳ ಭೀಕರವಾದುದು. ಆ ಕೂಸು ಬಂದ ಮೇಲೆ ಎಲ್ಲರೂ ನನ್ನನ್ನು ಮರೆತೆಬಿಟ್ಟಿದ್ದರು. ಎಲ್ಲರೂ ಅವನಿಗಾಗಿ ಕಾಳಜಿ ವಹಿಸುವವರೆ. ಮೊದಲು ಮನೆಯಲ್ಲಿ 'ಅಪ್ಪ ಮಲಗಿದ್ದಾನೆ, ಎಬ್ಬಿಸಬಾರದು' ಎಂಬ ಕಾಯಿದೆ ಇತ್ತು. ಈಗ 'ಸೋನ್ಯಾ ಮಲಗಿದ್ದಾನೆ. ಅವನನ್ನು ಎಬ್ಬಿಸಬಾರದು' ಎಂಬ ಹೊಸ ಕಾಯಿದೆ ಜಾರಿಗೆ ಬಂದಿತ್ತು. ಒಟ್ಟಿನಲ್ಲಿ ದುರಾದೃಷ್ಟ ನನ್ನ ಬೆನ್ನಿಗೆ ಬಿದ್ದಿದೆಯೆಂದು ಖಿನ್ನನಾದೆ.

ಹೀಗೆ ಒಂದು ಸಾಯಂಕಾಲ ನಾನು ನನ್ನಷ್ಟಕ್ಕೆ ಅಂಗಳದಲ್ಲಿ ರೈಲು ಬಿಡುತ್ತಿದ್ದೆ. ನನ್ನ ಆಟ ಹೀಗೆ ಸಾಗಿದ್ದಾಗ ಹೊರಗಿನಿಂದ ಅಪ್ಪ ಬಂದ. ಅವನು ಬಂದಿದ್ದನ್ನು ಗಮನಿಸಿದ ನಾನು ನನಗೆ ನಾನು ಹೇಳಿಕೊಂಡಂತೆ ಅಂದೆ: 'ಅಕಸ್ಮಾತ್ ಈ ಮನಿಯೊಳಗ ಇನ್ನ ಮ್ಯಾಲ ಇನ್ನೊಂದು ಮಗು ಏನಾದರೂ ಬಂತು ಅಂದ್ರ ನಾ ಮಾತ್ರ ಸುಮ್ಮನ ಇರಂಗಿಲ್ಲ. ನಾನೇ ಮನೆ ಬಿಟ್ಟು ಹೋಗ್ತೀನಿ.' ಅಪ್ಪ ನಸುನಕ್ಕು ಸುಮ್ಮನೆ ಒಳಹೋದ. ನಾನು ಹಾಗೆ ಪರೋಕ್ಷವಾಗಿ ಎಚ್ಚರಿಕೆ ಕೊಟ್ಟಿದ್ದು ಎಷ್ಟು ಒಳ್ಳೆಯ ಪರಿಣಾಮಗಳನ್ನು ನೀಡಿತೆಂದರೆ ನನಗೆ ನಂಬಲಾಗಲಿಲ್ಲ. ಇಷ್ಟು ದಿನ ನನ್ನನ್ನು ಕಂಡರೆ ಸಿಡಿಸಿಡಿ ಎನ್ನುತ್ತಿದ್ದ ಅಪ್ಪ ಈಗ ನನ್ನೊಡನೆ ತುಂಬ ಪ್ರೀತಿ–ವಾತ್ಸಲ್ಯದಿಂದ ನಡೆದುಕೊಳ್ಳತೊಡಗಿದ.

ಒಂದು ರಾತ್ರಿ ನನಗೆ ಗಾಬರಿಯಾಗುವಂತೆ ಯಾರೋ ನನ್ನನ್ನು ದೂಡಿಕೊಂಡು ನನ್ನ ಪಕ್ಕ ಮಲಗಿದಂತಾಯಿತು. ಓಹೋ! ಅವ್ವ ಇರಬೇಕು ಎಂದುಕೊಂಡೆ. ಕೊನೆಗೂ ಆಕೆ ಅಪ್ಪ ಮತ್ತು ಸೋನ್ಯಾನ ಕಾಟಕ್ಕೆ ರೋಸಿಹೋಗಿ ನನ್ನ ನಿಷ್ಕಲ್ಮಶ ಒಲವನ್ನು ಹುಡುಕಿಬಂದಳೆಂದು ನನಗೆ ಅತೀವ ಆನಂದವಾಯಿತು. ಆದರೆ ಪರಮಾನಂದದ ಆ ಗುಳ್ಳೆ ಬಹಳ ಹೊತ್ತು ಬದುಕಲಿಲ್ಲ. ಯಾಕೆಂದರೆ ಪಕ್ಕದ ಕೋಣೆಯಲ್ಲಿ ಅವಳು ಸೋನ್ಯಾನನ್ನು ಸಮಾಧಾನಪಡಿಸುವ ದನಿ ಇಡೀ ಮನಿಗೆಲ್ಲ ಕೇಳುವಂತಿತ್ತು. ಮುಗಿಲು ಹರಿದುಬೀಳುವಂತೆ ಅಳುತ್ತಿದ್ದ ಅವನನ್ನು ಆಕೆ ಇನ್ನಿಲ್ಲದಂತೆ ಸಂತೈಸುತ್ತಿದ್ದಳು: 'ಅಯ್ಯ ಸೋನ್ಯಾ, ನನ್ನ ಬಂಗಾರ, ಚೂ... ಚೂ... ಸುಮ್ಮನಾಗೋ... ನಮ್ಮ ಚಿನ್ನು ಯಾಕ ಹಟ ಮಾಡಲಿಕ್ಕೆ ಹತ್ಯಾನು, ಏನ್ ಬೇಕಂತ ಅಂವಗ, ಯಾಕ ಇಷ್ಟು ಚೀರಾತಾನು...' ಎಂದೆಲ್ಲ ಹೇಳುತ್ತ ಅವನನ್ನು ಸುಮ್ಮನಾಗಿಸಲು ಪ್ರಯತ್ನಿಸುತ್ತಿದ್ದುದು ಕಿವಿಗೆ ಬಿತ್ತು. ಅವ್ವನನ್ನು ಬಿಟ್ಟು ನನ್ನ ಕೋಣೆಗೆ ಬೇರೆ ಯಾರು ಬರಲು ಸಾಧ್ಯ? ಕಣ್ಣು ಬಿಟ್ಟು ನೋಡಿದೆ. ಓಹ್! ಅಪ್ಪ! ನನ್ನನ್ನು ಕಂಡರೆ ಕೆಂಡ ಕಾರುತ್ತಿದ್ದ ಅಪ್ಪ ಇಂದು ತುಂಬ ವಿನೀತನಾಗಿ ನನ್ನ ಪಕ್ಕ ಬಂದು ಮಲಗಿದ್ದಾನೆ! ದೊಡ್ಡದಾಗಿ ಉಸಿರು ಬಿಡುತ್ತ, ನಿದ್ದೆಗೆಟ್ಟ ಸಿಟ್ಟನ್ನು ಹೊರಹಾಕುತ್ತ ಆತ ಬಿದ್ದುಕೊಂಡಿದ್ದನ್ನು ನೋಡಿದಾಗ ನನಗೆ ಬಹಳ ಕನಿಕರವೆನಿಸಿತು. ಅವ್ವ ನನ್ನನ್ನು ಯಾವ ರೀತಿ ನಿಷ್ಕರುಣೆಯಿಂದ ತನ್ನ